**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 19.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ**

ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರವನ್ನು ಈ ದಿನ ನ್ಯಾಯಾಲಯದ ಮುಂದೆ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ. ಅದರಲ್ಲಿರುವ ಸಹಿ ನನ್ನದು.

ನಿಪಿ.1 ಖರೀದಿ ಕರಾರುಪತ್ರಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ. ನಿಪಿ.1 ದಾಖಲೆಯ ಪುಟ ಸಂ.5 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಎಫ್) ಹಾಗೂ ಪುಟ ಸಂ.3 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಜಿ) ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ಖರೀದಿಗೆ ಕೊಟ್ಟವರು ಹಾಗೂ ಆಸ್ತಿ ಖರೀದಿಗೆ ತೆಗೆದುಕೊಳ್ಳುವವರು ಇಬ್ಬರು ಅದಕ್ಕೆ ಸಹಿ ಮಾಡಿರುತ್ತಾರೆ ಅದರ ಜೊತೆ ಇನ್ನೊಬ್ಬ ಸಾಕ್ಷಿದಾರರಾದ ವಿನೋದಗೌಡ ಪಾಟೀಲ ರವರು ಸಹ ಸಹಿ ಮಾಡಿರುತ್ತಾರೆ. ಸದರಿಯವರ ಸಹಿಗಳನ್ನು ನಾನು ಗುರುತಿಸಬಹುದು.

**(ಪಾಟೀ ಸವಾಲುಃ ಪ್ರತಿವಾದಿಗಳು ಏಕತರ್ಪಿ ಇರುವ ಕಾರಣ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು)**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**